# ಪೊಲೀಸ್ ಆಯುಕ್ತರು, ಮಂಗಳೂರು ನಗರ ರವರ ನಡವಳಿಗಳು

ವಿಷಯ : ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ 32 ನೇ ಕದ್ರಿ ಉತ್ತರ ವಾರ್ಡಿನ ಯೆಯ್ಯಾಡಿ ಮುದ್ದರ ಮನೆ ರಸ್ತೆಗೆ ಕಾಲು ಸಂಕ ನಿರ್ಮಾಣ ಕಾಮಗಾರಿ ನಡೆಯುವ ಸಮಯ ವಾಹನ ಸಂಚಾರವನ್ನು ನಿಷೇಧಿಸಿ ತಾತ್ಕಾಲಿಕ ಅಧಿಸೂಚನೆ ಹೊರಡಿಸುವ ಕುರಿತು.

ಉಲ್ಲೇಖ: 1) ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಮಂಗಳೂರು ರವರ ಪತ್ರ ಸಂಖ್ಯೆ: ಸಕಾಇಂ/ಲೋಇ/ಉವಿಮಂ/ತಾಶಾ/ ಯೆಯ್ಯಾಡಿ/2021-22/2937, ದಿನಾಂಕ: 16-03-2022

2) ಸಹಾಯಕ ಪೊಲೀಸ್ ಆಯುಕ್ತರು, ಮಂಗಳೂರು ಸಂಚಾರ ಉಪವಿಭಾಗ, ಮಂಗಳೂರು ನಗರರವರ ವರದಿ ಸಂಖ್ಯೆ : 12/ಸಿಸಿಆರ್/ಸಂಉವಿ/2021, ದಿನಾಂಕ : 22-03-2022.

**********

ಪ್ರಸ್ತಾವನೆ:

ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ 32 ನೇ ಕದ್ರಿ ಉತ್ತರ ವಾರ್ಡಿನ ಯೆಯ್ಯಾಡಿ ಮುದ್ದರ ಮನೆ ರಸ್ತೆಗೆ ಕಾಲು ಸಂಕ ನಿರ್ಮಾಣ ಕಾಮಗಾರಿ ಕೈಗೊಳ್ಳುವ ವೇಳೆ ವಾಹನ ಸಂಚಾರ ನಿಷೇಧಿಸಿ ಬದಲಿ ಮಾರ್ಗದಲ್ಲಿ ಸಂಚಾರ ಮಾರ್ಪಾಡು ಮಾಡುವಂತೆ ಉಲ್ಲೇಖಿತ (1) ರಲ್ಲಿ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಮಂಗಳೂರು ರವರು ಕೋರಿಕೊಂಡಿರುತ್ತಾರೆ.

ಲೋಕೋಪಯೋಗಿ ಇಲಾಖೆ ರವರ ಕೋರಿಕೆಯಂತೆ ಸಹಾಯಕ ಪೊಲೀಸ್ ಆಯುಕ್ತರು, ಸಂಚಾರ ಉಪವಿಭಾಗ, ಮಂಗಳೂರು ನಗರ ರವರು ಸಲ್ಲಿಸಿದ ವರದಿಯನ್ನು ಪರಿಶೀಲಿಸಲಾಗಿದೆ. ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ 32 ನೇ ಕದ್ರಿ ಉತ್ತರ ವಾರ್ಡಿನ ಯೆಯ್ಯಾಡಿ ಮುದ್ದರ ಮನೆ ರಸ್ತೆಗೆ ಕಾಲು ಸಂಕ ನಿರ್ಮಾಣ ಕಾಮಗಾರಿ ಕೈಗೊಳ್ಳಲಾಗುವುದರಿಂದ ಸದ್ರಿ ರಸ್ತೆಯಲ್ಲಿ ವಾಹನ ಸಂಚಾರ ನಿಷೇಧದ ಆದೇಶ ಹೊರಡಿಸುವುದರ ಜೊತೆಯಲ್ಲಿ ಸಾರ್ವಜನಿಕರ ಓಡಾಟಕ್ಕೆ ಮತ್ತು ವಾಹನಗಳ ಸುಗಮ ಸಂಚಾರಕ್ಕಾಗಿ ಬದಲಿ ಮಾರ್ಗದ ವ್ಯವಸ್ಥೆ ಮಾಡಬೇಕಾದ ಅವಶ್ಯಕತೆ ಇರುವುದಾಗಿ ಹಾಗೂ ಈ ಕೆಳಕಂಡ ಷರತ್ತುಗಳ ಅನ್ವಯ ಆದೇಶಿಸುವಂತೆ ಕೋರಿರುತ್ತಾರೆ.

ಷರತ್ತುಗಳು:

1. ಕಾಮಗಾರಿ ಪ್ರಾರಂಭ ಮತ್ತು ಮುಗಿಸುವ ದಿನಾಂಕ , ಕಾಮಗಾರಿ ನಡೆಸುವ ಉಸ್ತುವಾರಿ ಇಂಜಿನಿಯರ್ ಹಾಗೂ ಕಂಟ್ರಾಕ್ಟರ್ ರವರ ಹೆಸರು ಮತ್ತು ಮೊಬೈಲ್ ದೂರವಾಣಿ ಸಂಖ್ಯೆ ಇರುವ ಫಲಕವನ್ನು ಕಾಮಗಾರಿ ನಡೆಯುವ ಸ್ಥಳದಲ್ಲಿ ಅಳವಡಿಸುವುದು.
2. ಕಾಮಗಾರಿ ನಡೆಯುವ ಸ್ಥಳದಲ್ಲಿ ಬ್ಯಾರಿಕೇಡ್/ಡೈವರ್ಶನ್ ಬೋರ್ಡ್ ಗಳನ್ನು ಅಳವಡಿಸುವುದು.
3. ಕಾಮಗಾರಿ ನಡೆಯುವ ಸ್ಥಳದಲ್ಲಿ ಬೆಳಕಿನ ವ್ಯವಸ್ಥೆ ಮಾಡುವುದು.
4. ಮಾನ್ಯ ಸರ್ವೋಚ್ಚ ನ್ಯಾಯಾಲಯ ಮತ್ತು ಮಾನ್ಯ ಉಚ್ಚ ನ್ಯಾಯಾಲಯಗಳು ನಿರ್ದೇಶಿಸಿರುವ ರಸ್ತೆ ಕಾಮಗಾರಿ ವೇಳೆ ಕೈಗೊಳ್ಳಬೇಕಾಗಿರುವ ಎಲ್ಲಾ ಸುರಕ್ಷತಾ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳುವುದು.

ಮೇಲ್ಕಂಡ ಪ್ರಸ್ತಾವನೆಯಲ್ಲಿ ಕಾಮಗಾರಿಯನ್ನು ನಡೆಸುವ ಸಮಯ ಈ ಷರತ್ತುಗಳಿಗೆ ಒಳಪಟ್ಟು ಕಾಲು ಸಂಕ ನಿರ್ಮಾಣ ಕಾಮಗಾರಿ ನಡೆಸುವ ಬಗ್ಗೆ ಎನ್ . ಶಶಿಕುಮಾರ್, ಐ.ಪಿ.ಎಸ್, ಪೊಲೀಸ್ ಆಯುಕ್ತರು ಹಾಗೂ ಅಪರ ದಂಡಾಧಿಕಾರಿಗಳು, ಮಂಗಳೂರು ನಗರ ಆದ ನಾನು ಮೋಟಾರು ವಾಹನ ಕಾಯ್ದೆ 1988 ರ ಕಲಂ 115 ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ದಿನಾಂಕ : 19 -04-2022 ರಿಂದ 19 -05-2022 ರವರೆಗೆ 31 ದಿನಗಳ ಕಾಲ ವಾಹನಗಳ ಸಂಚಾರದಲ್ಲಿ ಮಾರ್ಗ ಬದಲಾಯಿಸಿ ಈ ಕೆಳಕಂಡಂತೆ ತಾತ್ಕಾಲಿಕ ಅಧಿಸೂಚನೆಯನ್ನು ಹೊರಡಿಸಲಾಗಿದೆ.

## ಆದೇಶ

**ಸಿಆರ್ ಎಂ-3/07/ ಅಧಿಸೂಚನೆ/ ಮಂ.ನ/ 2022** **ದಿನಾಂಕ: 19 /04/2022**

1. ಯೆಯ್ಯಾಡಿ ಕುಂಟಲ್ಪಾಡಿ ರಸ್ತೆಯಲ್ಲಿ ಎಲ್ಲಾ ರೀತಿಯ ವಾಹನಗಳ ಸಂಚಾರವನ್ನು ನಿಷೇಧಿಸಲಾಗಿದೆ.
2. ಯೆಯ್ಯಾಡಿ ಕಡೆಯಿಂದ ಕುಂಟಲ್ಪಾಡಿ ರಸ್ತೆಯ ಮೂಲಕ ಶಕ್ತಿನಗರ ಕಡೆಗೆ ಸಂಚರಿಸುವ ಎಲ್ಲಾ ವಾಹನಗಳು ಮೇರಿಹಿಲ್ ಜಂಕ್ಷನ್‌ನಿಂದ ಗುರುನಗರ ರಸ್ತೆಯಾಗಿ ಆದಿತ್ಯನಗರ ರಸ್ತೆಯ ಮೂಲಕ ಶಕ್ತಿನಗರ ಬಿಕರ್ಣಕಟ್ಟೆ ಹಾಗೂ ನಂತೂರು ಕಡೆಗೆ ಸಂಚರಿಸುವುದು.
3. ಶಕ್ತಿನಗರ ಕಡೆಯಿಂದ ಯೆಯ್ಯಾಡಿ ರಸ್ತೆಯ ಮೂಲಕ ಸಂಚರಿಸುವ ಎಲ್ಲಾ ವಾಹನಗಳು ಆದಿತ್ಯನಗರ, ಗುರುನಗರ ರಸ್ತೆಯ ಮೂಲಕ ಮೇರಿಹಿಲ್ ಜಂಕ್ಷನ್‌ಗೆ ಬಂದು ಅಲ್ಲಿಂದ ಮುಂದೆ ಸಂಚರಿಸುವುದು.

ಈ ಅಧಿಸೂಚನೆಯು ದಿನಾಂಕ: 19-04-2022 ರಿಂದ ದಿನಾಂಕ: 19 -05-2022 ರವರೆಗೆ ಊರ್ಜಿತದಲ್ಲಿರುತ್ತದೆ.

ಈ ಆದೇಶದನ್ವಯ ಸದ್ರಿ ರಸ್ತೆಯಲ್ಲಿ ಅವಶ್ಯವುಳ್ಳ ಸೂಚನಾ ಫಲಕಗಳನ್ನು ಲೋಕೋಪಯೋಗಿ ಇಲಾಖೆ ವತಿಯಿಂದ ಅಳವಡಿಸುವುದು ಹಾಗೂ ಸುಗಮ ಸಂಚಾರ ನಿಯಂತ್ರಣಕ್ಕೆ ಸಿಬ್ಬಂದಿಗಳನ್ನು ನಿಯೋಜಿಸಿ ಈ ಆದೇಶ ಅನುಷ್ಠಾನಗೊಳಿಸಲು ಸಹಾಯಕ ಪೊಲೀಸ್ ಆಯುಕ್ತರು , ಮಂಗಳೂರು ಸಂಚಾರ ಉಪ ವಿಭಾಗ, ಮಂಗಳೂರು ನಗರ ರವರು ಅಧಿಕಾರವುಳ್ಳವರಾಗಿರುತ್ತಾರೆ.

ಈ ಆದೇಶವನ್ನು ದಿನಾಂಕ: 19 -04-2021 ರಂದು ನನ್ನ ಸ್ವ ಹಸ್ತ ಸಹಿ ಹಾಗೂ ಮುದ್ರೆಯೊಂದಿಗೆ ಹೊರಡಿಸಿರುತ್ತೇನೆ.

Digitally Signed by
Shashikumar N
Date: 19-04-2022 12:07:37
Reason: Approved

(ಎನ್. ಶಶಿಕುಮಾರ್, ಐ.ಪಿ.ಎಸ್.,)

ಪೊಲೀಸು ಆಯುಕ್ತರು ಹಾಗೂ ಅಪರ ದಂಡಾಧಿಕಾರಿಗಳು
ಮಂಗಳೂರು ನಗರ, ಮಂಗಳೂರು

ಪೊಲೀಸು ಆಯುಕ್ತರು
ಮಂಗಳೂರು ನಗರ, ಮಂಗಳೂರು

ಇವರಿಗೆ:

1. ಜಿಲ್ಲಾಧಿಕಾರಿಯವರು, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಇವರಿಗೆ ಮಾಹಿತಿಗಾಗಿ.
2. ಪ್ರಾದೇಶಿಕ ಸಾರಿಗೆ ಅಧಿಕಾರಿ, ದ.ಕ. ಮಂಗಳೂರು ಇವರಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
3. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಮಂಗಳೂರುರವರಿಗೆ ಸೂಕ್ತ ಕ್ರಮಕ್ಕಾಗಿ
4. ಸಹಾಯಕ ಕಮೀಷನರ್, ಮಂಗಳೂರು.
5. ತಹಶೀಲ್ದಾರ್, ಮಂಗಳೂರು ಇವರಿಗೆ ಮಾಹಿತಿಗಾಗಿ.
6. ಆಯುಕ್ತರು, ಮಂಗಳೂರು ಮಹಾನಗರಪಾಲಿಕೆ ಇವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.

7. ಜಿಲ್ಲಾ ವಾರ್ತಾ ಮತ್ತು ಪ್ರಚಾರಾಧಿಕಾರಿಗಳು, ದ.ಕ. ಮಂಗಳೂರು ಇವರಿಗೆ ಈ ಅಧಿಸೂಚನೆಯನ್ನು ಜಿಲ್ಲೆಯ ವಾರ್ತಾ ಮಾಧ್ಯಮಗಳಲ್ಲಿ ವಾರ್ತಾ ರೂಪದಲ್ಲಿ ಉಚಿತವಾಗಿ ಪ್ರಚಾರ ಪಡಿಸಲು ಕೋರಿದೆ.
8. ವಿಭಾಗೀಯ ನಿಯಂತ್ರಣಾಧಿಕಾರಿ, ಕೆ.ಎಸ್. ಆರ್. ಟಿ .ಸಿ ಮಂಗಳೂರು.
9. ಪೊಲೀಸ್ ಅಧೀಕ್ಷಕರು ,ದ.ಕ ಜಿಲ್ಲೆ ಮಂಗಳೂರು
10. ಉಪ ಪೊಲೀಸು ಆಯುಕ್ತರು (ಅಪರಾಧ ಮತ್ತು ಸಂಚಾರ) ಮಂಗಳೂರು ನಗರ.
11. ಉಪ ಪೊಲೀಸು ಆಯುಕ್ತರು (ಕಾ ಮತ್ತು ಸು) ಮಂಗಳೂರು ನಗರ.
12. ಉಪ ಪೊಲೀಸು ಆಯುಕ್ತರು ಸಿ.ಎ.ಆರ್, ಮಂಗಳೂರು ನಗರ.
13. ಸಹಾಯಕ ಪೊಲೀಸ್ ಆಯುಕ್ತರು, ಮಂಗಳೂರು ಸಂಚಾರ ಉಪ ವಿಭಾಗ ಇವರಿಗೆ
14. ಪೊಲೀಸ್ ನಿರೀಕ್ಷಕರು, ಸಂಚಾರ ದಕ್ಷಿಣ, ಪೊಲೀಸ್ ಠಾಣೆ, ಮಂಗಳೂರು ನಗರ
15. ಅಡ್ಮಿನ್, ಕಂಪ್ಯೂಟರ್ ವಿಭಾಗ, ಪೊಲೀಸ್ ಆಯುಕ್ತರ ಕಛೇರಿ, ಮಂಗಳೂರು ನಗರ
16. ಪೊಲೀಸ್ ನಿರೀಕ್ಷಕರು, ನಿಸ್ತಂತು ಕೊಠಡಿ, ಪೊಲೀಸ್ ಆಯುಕ್ತರ ಕಛೇರಿ, ಮಂಗಳೂರು ನಗರ
17. ವಿಷಯ ನಿರ್ವಾಹಕರು, GNL-1, ಪೊಲೀಸ್ ಆಯುಕ್ತರ ಕಛೇರಿ, ಮಂಗಳೂರು ನಗರ